ಕೃಷ್ಣಪ್ಪಗೆ ಗೊತ್ತು. ಫಾರ್ಮನ್ನು ಕೊಟ್ಟು ತುಂಬಿಕೊಂಡು ಬನ್ನಿ ಅನ್ನುತ್ತಾರೆ. ಅದರಲ್ಲಿ ಹಲವು ಕಾಲಂಗಳಿರುವುದರಿಂದ ವಿದ್ಯಾವಂತರಿಗೇ ಕಷ್ಟ. ಬ್ಯಾಂಕ್ ಸ್ಟಾಫ್ ನಮಗೆ ಬಿಡುವಿಲ್ಲ; ಫಾರಂ ಭರ್ತಿ ಮಾಡುವುದು ನಮ್ಮ ಕೆಲಸವಲ್ಲ ಎಂದು ನಿರಾಕರಿಸುತ್ತಾರೆ. ತಮ್ಮ ಕೆಲಸದಲ್ಲೇ ಮಗ್ನರಾದ ಗ್ರಾಹಕರು 'ಆಗಲ್ಲ' ಎನ್ನುತ್ತಾರೆ. ಅಪರೂಪಕ್ಕೆ ಪರಿಚಿತರು, ಸಹಾಯ ಮಾಡುವ ಮನಸ್ಥಿತಿಯವರು ಇದ್ದರೆ ಭರ್ತಿ ಮಾಡಿ ಕೊಡುವುದುಂಟು. ಮ್ಯಾನೇಜರ್ ದೊಡ್ಡ ಮೊತ್ತದ ಡಿಪೋಸಿಟ್ ಮಾಡುವವರ ಓಪನಿಂಗ್ ಫಾರ್ಮನ್ನು ಭರ್ತಿ ಮಾಡಿ ಕೊಡುವುದಿದೆ. ಗಣ್ಯ ವ್ಯಕ್ತಿಗಳಿಗೂ ಇಲ್ಲವೆನ್ನುವುದಿಲ್ಲ.

ತಮ್ಮದು ಒಂಥರಾ ವೇಶ್ಯಾವೃತ್ತಿ ಎಂದು ಕೃಷ್ಣಪ್ಪಗೆ ಅನ್ನಿಸಿದೆ. ಅನುಕೂಲ ಆಗುವುದಾದರೆ ಕೈಕಾಲು ಹಿಡಿಯಬೇಕು; ಕಳ್ಳರು, ಸುಳ್ಳರು, ಭ್ರಷ್ಟಾಚಾರಿಗಳು, ದಂಧೆಕೋರರು, ರಾಜಕಾರಣಿಗಳು ಎಲ್ಲರನ್ನೂ ಅಗತ್ಯಕ್ಕೆ ತಕ್ಕಂತೆ ಓಲೈಸಬೇಕು; ಸಾಲ ಪಡೆಯುವಾಗ ಬಣ್ಣಬಣ್ಣದ ಮಾತುಗಳನ್ನು ಹೇಳುವ ಸಾಲಿಗರು ವಸೂಲಿಗೆ ಹೋದಾಗ ಹೀನೈಸುವುದನ್ನು ಸಹಿಸಿಕೊಳ್ಳಬೇಕು. ಇದೆಲ್ಲದರ ಜೊತೆಗೆ ಮ್ಯಾನೇಜ್‌ಮೆಂಟ್ ಹೇಳಿದ್ದನ್ನು ಪಾಲಿಸಬೇಕು.

ಕೃಷ್ಣಪ್ಪ ಆಕೆಯ ಹೆಸರು ಕೇಳಿದರು. 'ಸಾವಿ' ಎಂದಳು. ಇಲೆಕ್ಷನ್ ಐಡಿಯಲ್ಲಿ ಸಾವಿತ್ರಿ ಎಂದಿತ್ತು. 'ಇದರಲ್ಲಿ ಸಾವಿತ್ರಿ ಎಂದಿದೆ. ಪೂರ್ತಿ ಹೆಸರು ಹೇಳಿ' ಎಂದರು. ಸಾವಿ ಎಂದು ಕರೆಯುತ್ತಾರೆ, ಹೆಸರು ಸಾವಿತ್ರಿ ಎಂದಳು. ಜನ್ಮ ದಿನಾಂಕ ಜನವರಿ ಒಂದು ಎಂದಿತ್ತು. ಹುಟ್ಟಿದ

